ಅಧ್ಯಕ್ಷರು ಅವರು ಸ್ಪಷ್ಟವಾಗಿ 2007–08ರಲ್ಲಿ ಕನ್ಸೀಡರ್ ಮಾಡುತ್ತೇವೆಂದು ಹೇಳಿದ್ದಾರೆ ಅಷ್ಟು ಹೇಳಿದರೂ ಸಹಿತ, ನೀವು ಹಿರಿಯ ಸದಸ್ಯರು ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನೀವು ನಮ್ಮ ರಕ್ಷಣೆಗೆ ಬರಬೇಕು

ಅಧ್ಯಕ್ಷರು ನೀವು ಈ ತರಹ ಮಾಡುವುದು ಸರಿಯಾದುದು ಅಲ್ಲ ಆಗಲೇ ಒಂದು ಗಂಟೆ ಮುಗಿದು ಹೋಯಿತು ಇನ್ನು 3 ಪ್ರಶ್ನೆಗಳು ಇವೆ ದಯಮಾಡಿ ಕುಳಿತುಕೊಳ್ಳಬೇಕು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ತಾವೇ ಹೇಳಬೇಕು ಇದರ ಬಗ್ಗೆ

ಅಧ್ಯಕ್ಷರು ಮುಂದಿನ ಪ್ರಶ್ನೆ

ಪಶುವೈದ್ಯಾಧಿಕಾರಿಗಳ ನೇಮಕಾತಿ

42 (198) ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಶುವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು , (ಜಿಲ್ಲಾವಾರು ಮತ್ತು ವರ್ಗವಾರು ವಿವರ ನೀಡುವುದು) ,

ಆ) ರಾಜ್ಯದ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳು ಎಷ್ಟು,

ಇ) ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು ,

ಈ) ಹಾಗಿದ್ದಲ್ಲಿ, ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೇ ಪ್ರಾರಂಭವಾಗಿದೆಯೇ , ಹಾಗಿಲ್ಲವಾದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ರೇವೂ ನಾಯಕ್ (ಬೆಳಮಗಿ) (ಪಶುಸಂಗೋಪನೆ ಸಚಿವರು)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಒಟ್ಟಾರೆ 1985 ಇದ್ದು, ಅದರಲ್ಲಿ 1161 ಪಶು ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಜಿಲ್ಲಾವರು ಅನುಬಂಧದಲ್ಲಿ ನೀಡಿದೆ ಎಲ್ಲವೂ 'ಬಿ' ವರ್ಗದ ಹುದ್ದೆಗಳಾಗಿರುತ್ತವೆ

ಆ) ರಾಜ್ಯದಲ್ಲಿ ಒಟ್ಟು 824 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತವೆ

ಇ) ಪಶುವೈದ್ಯಕೀಯ ವಿಶ್ವವಿದ್ಯಾಲಯದಿಂದ ಬಿ ವಿ ಎಸ್ ಸಿ ಪದವಿ ಪಡೆದ ಪದವೀಧರರನ್ನು ನೇರ ನೇಮಕಾತಿ ಮುಖಾಂತರ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ

ಈ) ಹೌದು ಪ್ರಾರಂಭವಾಗಿದೆ

ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗದಿಂದ 41 ಪಶುವೈದ್ಯಾಧಿಕಾರಿಗಳ ಹುದ್ದೆಗೆ ಆಯ್ಕೆ ಮುಗಿದಿರುತ್ತದೆ ಸದ್ಯದಲ್ಲೇ ಆಯ್ಕೆಯಾದವರಿಗೆ ನೇಮಕಾತಿ ಆದೇಶ ಹೊರಡಿಸಲಾಗುತ್ತದೆ ಮತ್ತು 77 ಪಶುವೈದ್ಯಾಧಿಕಾರಿಗಳ ನೇಮಕಾತಿಗಾಗಿ ಪ್ರಸ್ತಾವನೆಯನ್ನು ಕೆ ಪಿ ಎಸ್ ಸಿ ಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ವಿಶೇಷ ನೆಮಕಾತಿ ಪ್ರಕ್ರಿಯೆಯಲ್ಲಿ 577 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಈಗಾಗಲೇ 383 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಉಳಿದ 194 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುವೈದ್ಯ ಹುದ್ದೆಗಳ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
1	**2**	**3**	**4**	**5**
1	ಬೆಂಗಳೂರು ನಗರ	91	87	04
2	ಬೆಂಗಳೂರು ಗ್ರಾಮಾಂತರ	80	73	07
3	ದಾವಣಗೆರೆ	69	58	11
4	ಶಿವಮೊಗ್ಗ	66	55	11
6	ಕೋಲಾರ	106	84	22
7	ತುಮಕೂರು	112	81	31
8	ಮೈಸೂರು	76	48	28
9	ಚಾಮರಾಜನಗರ	30	11	19
10	ಚಿಕ್ಕಮಗಳೂರು	72	45	27

1	2	3	4	5
11	ಮಂಗಳೂರು	44	27	17
12	ಉಡುಪಿ	34	25	9
13	ಹಾಸನ	88	48	40
14	ಮಡಿಕೇರಿ	32	13	19
15	ಮಂಡ್ಯ	103	66	37
16	ಬೆಳಗಾವಿ	144	82	62
17	ಗದಗ್	55	21	34
18	ಹಾವೇರಿ	72	30	42
19	ಧಾರವಾಡ	55	36	19
20	ಕಾರವಾರ	85	23	62
21	ಬಿಜಾಪುರ	57	38	19
22	ಬಾಗಲಕೋಟೆ	65	41	24
23	ಗುಲ್ಬರ್ಗಾ	136	31	105
24	ಬಳ್ಳಾರಿ	81	24	57
25	ರಾಯಚೂರು	57	15	42
26	ಕೊಪ್ಪಳ	43	21	22
27	ಬೀದರ್	75	45	30
	ಒಟ್ಟು	**1985**	**1161**	**824**

ಶ್ರೀ ಹೊನ್ನಾಳಿಜಬ್ಬಾರ್ ಖಾನ್ ಹಯಾತ್ ಖಾನ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಆದರೆ ಹಲವು ಆಸ್ಪತ್ರೆಗಳಲ್ಲಿ ಎಕ್ಸರೆ ಯಂತ್ರಗಳು ಇವೆ ಅದನ್ನು ಉಪಯೋಗಿಸುವುದಕ್ಕೆ ಸಿಬ್ಬಂದಿ ವರ್ಗದವರು ಇಲ್ಲ ಉದಾ ನನ್ನ ಕ್ಷೇತ್ರದೊಳಗೆ ಈಗಾಗಲೇ 10 ವರ್ಷಗಳು ಕಳೆದರೂ ಕೂಡ ಅಲ್ಲಿ ಎಕ್ಸರೆ ಯಂತ್ರಗಳಿದ್ದರೂ ಕೂಡ ಅಲ್ಲಿ ಸಿಬ್ಬಂದಿ ವರ್ಗದವರು ಇಲ್ಲ ಅಲ್ಲಿ ಯಾವಾಗ appointment

ಮಾಡುತ್ತಾರೋ ಅದನ್ನು ಹೇಳಬೇಕು ಇನ್ನು ಎರಡನೆಯದಾಗಿ ಹೇಳುವುದಾದರೆ, ಬಹಳಷ್ಟು ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆಯಿರುವುದರಿಂದ ಅಲ್ಲಿ ಜಾನುವಾರುಗಳಿಗೆ ಯಾವುದೇ ತರಹದ ಚಿಕಿತ್ಸೆಗಳು ಸಿಗುತ್ತಿಲ್ಲ ಅಲ್ಲಿ ಅದನ್ನು ಜಾನುವಾರು ಆಸ್ಪತ್ರೆ ಎಂದು ಹಾಗೆಯೇ ಬಿಟ್ಟಿರುವುದು ಬಹಳ ಅನ್ಯಾಯವಾಗುತ್ತದೆ ಇನ್ನು ಮೂರನೆಯದಾಗಿ ಹೇಳುವುದಾದರೆ, ಅನೇಕ ಪಶುಸಂಗೋಪನಾ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುತ್ತೇನೆಂದು ಈ ಹಿಂದೆ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಅದನ್ನು ಯಾವಾಗ ಮೇಲ್ದರ್ಜೆಗೇರಿಸುತ್ತಾರೆ, ಮತ್ತು ನನ್ನ ಭಾಗದಲ್ಲಿರುವಂತಹ ವಿಶ್ವವಿದ್ಯಾನಿಲಯದೊಳಗಿರುವ ಪಶುಸಂಗೋಪನಾ ಆಸ್ಪತ್ರೆಯನ್ನು ಯಾವಾಗ ಮೇಲ್ದರ್ಜೆಗೆ ಏರಿಸುತ್ತಾರೆಂಬ ಬಗ್ಗೆ ಹೇಳಬೇಕು

ಶ್ರೀ ರೇವೂ ನಾಯಕ್ ಬೆಳಮಗಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ ಅವರು ಕೇಳಿದ ಪ್ರಶ್ನೆ (ಅ)ಗೆ ಪಶುಪಾಲನಾ ಮತ್ತು ಪಶು ವೈದ್ಯ ಇಲಾಖೆಯಲ್ಲಿ ಒಟ್ಟಾರೆ 1985 ಹುದ್ದೆ ಇದೆ ಅದರಲ್ಲಿ 1161 ಪಶು ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಜಿಲ್ಲಾವಾರು ಅನುಬಂಧದಲ್ಲಿ ನೀಡಿದ ಈ ವರ್ಗದ ಹುದ್ದೆಗಳಾಗಿರುತ್ತದೆ ಮತ್ತೆ ಅವರು ಕೇಳಿದ (ಆ) ಪ್ರಶ್ನೆಗೆ ರಾಜ್ಯದಲ್ಲಿ ಒಟ್ಟು 824 ಪಶುವೈದ್ಯಾಧಿಕಾರಿಗಳು ಖಾಲಿ ಇರುತ್ತದೆ ಅವರು ಕೇಳಿದ (ಇ) ಪ್ರಶ್ನೆಗೆ ಪಶುವೈದ್ಯ ಅಧಿಕಾರಿಗಳನ್ನು ವಿಶ್ವವಿದ್ಯಾನಿಲಯದಿಂದ ಬಿ ವಿ ಎಸ್ ಸಿ ಪದವಿ ಪಡೆದ ಪದವೀಧರರನ್ನು ನೇರ ನೇಮಕಾತಿ ಮುಖಾಂತರ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಮಾಡಲಾಗುವುದು ಎಂದು ಉತ್ತರವನ್ನು ಕೊಟ್ಟಿದ್ದೇನೆ ಹಾಗೂ (ಈ) ಪ್ರಶ್ನೆಗೆ ಪ್ರಕ್ರೀಯೆ ಪ್ರಾರಂಭವಾಗಿದೆ ಎಂದು ಹೇಳಿದ್ದೇವೆ ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗದಿಂದ 41 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಆಯ್ಕೆ ಮುಗಿದಿರುತ್ತದೆ ಸದ್ಯದಲ್ಲೆ ಆಯ್ಕೆಯಾದವರಿಗೆ ನೇಮಕಾತಿ ಆದೇಶ ಹೊರಡಿಸಲಾಗಿರುತ್ತದೆ ಮತ್ತು 77 ಪಶುವೈದ್ಯಾಧಿಕಾರಿಗಳ ನೇಮಕಾತಿಗಾಗಿ ಪ್ರಸ್ತಾವನೆಯನ್ನು ಕೆಪಿಎಸ್ಸಿ ಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ಪ್ರಕ್ರೀಯೆಯಲ್ಲಿ 577 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಈಗಾಗಲೇ 383 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಉಳಿದ 194 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ

ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ ಮಾನ್ಯ ಸಚಿವರು ಹೇಳಿದ ಉತ್ತರವನ್ನು ನಾನು ಕೇಳುತ್ತಿಲ್ಲ ನಾನು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುವುದು ಬಿಟ್ಟು ಈ ರೀತಿ ಉತ್ತರವನ್ನು ಕೊಟ್ಟರೆ ಹೇಗೇ?

ಅಧ್ಯಕ್ಷರು ಮಾನ್ಯ ಹಯಾತ್ ಖಾನ್ ರವರೆ ಈ ಹಿಂದೆ ತಾವು ಮಂತ್ರಿಗಳಾಗಿದ್ದವರು, ಮಾನ್ಯ ಸಚಿವರು ಹೊಸದಾಗಿ ಮಂತ್ರಿಗಳಾಗಿದ್ದಾರೆ ತಾವು ದಯಮಾಡಿ ಅವರ ಹತ್ತಿರ ಕುಳಿತುಕೊಂಡು ಇದನ್ನು ಬಗೆಹರಿಸಿ ಕೊಳ್ಳಬಹುದು

ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವುದು ಅಲ್ಲಿ x-ray machine ಬಂದು 10 ವರ್ಷಗಳಾಯಿತು ಸಿಬ್ಬಂದಿವರ್ಗದವರು ಇಲ್ಲ, ಅವರನ್ನು ಯಾವಾಗ appointment ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ ನನ್ನ ಕ್ಷೇತ್ರದಲ್ಲಿರುವಂತಹ ಪಶುಸಂಗೋಪನಾ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುತ್ತೇನೆಂದು ಹೇಳಿದ್ದರು ಅದನ್ನು ಯಾವಾಗ ಮಾಡುತ್ತೀರೆಂದು ನಾನು ಕೇಳುತ್ತಿದ್ದೇನೆ ಬಹಳ ವರ್ಷದಿಂದ ಹುದ್ದೆಗಳು ಭರ್ತಿಯಾಗದೆ ಹಾಗೆಯೇ ಇದೆ ಅದನ್ನು ಯಾವಾಗ ಭರ್ತಿ ಮಾಡುತ್ತೀರೆಂದು ನಾನು ಕೇಳುತ್ತಿದ್ದೇನೆ

ಅಧ್ಯಕ್ಷರು ಮಾನ್ಯ ಮಂತ್ರಿಗಳು ಹೊಸದಾಗಿ ಬಂದಿದ್ದಾರೆ, ತಾವು ಅವರ ಪಕ್ಕದಲ್ಲಿ ಕುಳಿತುಕೊಂಡು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ

ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ ಹೊಸದಾಗಿ ಮಂತ್ರಿಯಾಗಿ ಬಂದವರಿಗೆ ಪ್ರಶ್ನೆ ಕೇಳಬೇಡಿಯೆಂದು ಮಾಡಿ

ಅಧ್ಯಕ್ಷರು ಮಾನ್ಯ ಮಂತ್ರಿಗಳೇ ತಮ್ಮ ಹತ್ತಿರ ಏನು ಉತ್ತರವಿದೆಯೋ ಅದನ್ನು ಹೇಳಿ

ಶ್ರೀ ರೇವೂ ನಾಯಕ್ ಬೆಳಮಗಿ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ ಅವರೇನಾದರು ಲಿಖಿತ ಮೂಲಕ ಕಳುಹಿಸಿದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ ಈಗ ಒಟ್ಟಾರೆ 824 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತದೆ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ಆ ಮಾಹಿತಿ ನನಗೆ ಬೇಕಾಗಿಲ್ಲ ಅದರ ಬಗ್ಗೆ ಇಲ್ಲಿ ಉತ್ತರವಿದೆ

ಶ್ರೀ ರೇವೂ ನಾಯಕ್ ಬೆಳಮಗಿ 15 ದಿವಸಗಳಲ್ಲಿ ಆದೇಶವನ್ನು ಹೊರಡಿಸಿದ್ದೇವು ವಿಶೇಷ ನೇಮಕಾತಿಯಡಿಯಲ್ಲಿ 194 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಯನ್ನು ಸ್ವೀಕರಿಸಿದ್ದೆವು 77 ಹುದ್ದೆಗಳನ್ನು ಕೆಪಿಎಸ್‌ಸಿಯಿಂದ ಆಯ್ಕೆ ಮಾಡಿದ ಪಟ್ಟಿಯನ್ನು ಈ ತಕ್ಷಣವೆ ಬಿಡುಗಡೆ ಮಾಡುತ್ತೇವೆ ಉಳಿದ 515 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ

ಅಧ್ಯಕ್ಷರು ಆಯಿತು

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷದಿಗಳ ಕೊರತೆ

43 (178) ಶ್ರೀ ಜಿ ವಿ ಶ್ರೀರಾಮರೆಡ್ಡಿ (ವಿಧಾನಸಭಾ ಸದಸ್ಯರು) (ಬಾಗೇಪಲ್ಲಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಿಂದಾಗಿ ಬಡ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಔಷಧಿಗಳನ್ನು ಸರಬರಾಜು ಮಾಡಲು ಸರ್ಕಾರ ಕಲ್ಪಿಸಿದೆಯೇ ,

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಹುತೇಕ ಆಸ್ಪತ್ರೆಗಳಲ್ಲಿ ಔಷಧಿಗಳಲ್ಲಿ ಕೊರತೆ ಇರುವುದಿಲ್ಲ ಆದರೆ ಕೆಲವು ಆಸ್ಪತ್ರೆಗಳಲ್ಲಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಹೌದು ಈ ದಿಸೆಯಲ್ಲಿ ಅಗತ್ಯ ಹಾಗೂ ಬೇಡಿಕೆಗಳಿಗನುಗುಣವಾಗಿ ಔಷಧಿ ಪೂರೈಕೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ

ಇ) ಸರ್ಕಾರದ ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಉಂಟಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದು, ಅಂತಹ ಆಸ್ಪತ್ರೆಗಳಿಗೆ ಬೇಕಾಗಿರುವ ಔಷಧಿಗಳು ಆ ಜಿಲ್ಲಾ ಉಗ್ರಾಣದಲ್ಲಿ ಇಲ್ಲದಿದ್ದ ಪಕ್ಷದಲ್ಲಿ ಔಷಧಿ ಲಭ್ಯವಿರುವ ಬೇರೆ ಜಿಲ್ಲೆಯ ಔಷಧ ಉಗ್ರಾಣಗಳಿಂದ ಪಡೆದು ಔಷಧಿ